ಲೋಕೋಭಿನ್ನರುಚಿಃ. ಕೆಲವರಂತೂ ಪ್ರಯಾಣದ ಉದ್ದಕ್ಕೂ ಫೋನಿನ ಮಾತುಕತೆಯಲ್ಲೋ, ರೀಲ್ಸ್ ವಿಡಿಯೋ ನೋಡಿಕೊಂಡೋ ಇದ್ದುಬಿಡುತ್ತಾರೆ. ನನ್ನ ಶಿಕ್ಷಕಿ ಗೆಳತಿಯೊಬ್ಬಳು ಬರೋಬ್ಬರಿ ಇಪ್ಪತ್ತೈದು ವರುಷಗಳಿಂದ ಮನೆಯಿಂದ ಶಾಲೆಗೆ ಅಂತ ಸರಾಸರಿ ನಾಕುಗಂಟೆ ಪ್ರಯಾಣಿಸುತ್ತಾಳೆ. ಸಾಕಷ್ಟು ಪುಸ್ತಕ ಓದಿದ್ದಾಳೆ, ಬರೆಯುತ್ತಾಳೆ. ಇಡೀ ಸಮಯವೆಲ್ಲ ಬಸ್ಸಿನಲ್ಲಿ ಕಳೆತೀಯ, ಹೇಗೆ ಇವೆಲ್ಲ ಸಾಧ್ಯ? ಅಂತ ಕೇಳಿದರೆ ಅವಳಲ್ಲಿ ಸಿದ್ಧ ಉತ್ತರವಿದೆ. ನಾಕು ಗಂಟೆಯನ್ನು ಅಚ್ಚುಕಟ್ಟಾಗಿ ಬಳಸಿಕೊಳ್ಳುತ್ತಾಳೆ. ಅವಳ ಓದು ಬರವಣಿಗೆ ಎಲ್ಲವೂ ಬಸ್ಸಿನಲ್ಲಿಯೇ. ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿರುವ ಆಕೆ ನಿರರ್ಗಳವಾಗಿ ಇಂಗ್ಲಿಷು ಮಾತಾಡುತ್ತಾಳೆ. ಅದನ್ನು ಆಕೆ ಕಲಿತದ್ದು ಬಸ್ಸಿನಲ್ಲಿಯೇ ಅಂತೆ. ಬಸ್ಸು ಕಲಿಕಾ ಮಾಧ್ಯಮವೂ ಆಯಿತು.

ಎಳವೆಯಲ್ಲಿ ಬಸ್ಸಿಗೆ ಬೇಕಾದಷ್ಟೇ ದುಡ್ಡು ಮನೆಯವರು ಕೊಡುತ್ತಿದ್ದ ಕಾರಣ ಗೂಡಂಗಡಿಯಿಂದ ಕ್ಯಾಂಪ್ಕೋ ಚಾಕಲೇಟ್ ತಿನ್ನಲಿಕ್ಕೆ ಹಣವೇ ಒದಗಿಬರುತ್ತಿರಲಿಲ್ಲ. ಅದಕ್ಕಾಗಿ ನಾನು ಮೊದಲ ದಿವಸವೇ ಗೋರಂಟ ಕನಕಾಂಬರ ಮೊಗ್ಗುಗಳನ್ನು ಕಟ್ಟಿ ಅದನ್ನು ಅವರೆ ಚಪ್ಪರದ ಮೇಲೆ ಇಬ್ಬನಿ ಬೀಳಲು ಇಟ್ಟು, ಮಾರನೇ ದಿವಸ ಶಾಲೆಯ ಡಕ್ ಬ್ಯಾಕಿಗೆ ತುರುಕಿ ಒಂದೇ ಭರ ಓಡುತ್ತಾ ನಾನು ಪ್ರತಿದಿನ ಹೋಗುವ ಮುಂಚಿನ ಅನುರಾಧ ಬಸ್ಸಿಗೆ ಹೋಗಿ ಹೂ ಮಾಲೆ ಹಿಡಿದರೆ ಕೆಲವೊಮ್ಮೆ ಬಸ್ಸು ನಿಲ್ಲಿಸಿ ಹೂ ಮಾಲೆ ತೆಗೆದುಕೊಂಡು ಎರಡು ರುಪಾಯಿ ಕೊಡುತ್ತಿದ್ದರು. ಮನೆಯಲ್ಲಿ ಹೇಳಿದರೆ ಮಾರನೇ ದಿನ ಬಸ್ಸಿಗೆ ದುಡ್ಡು ಸಿಗುವುದಿಲ್ಲ ಅನ್ನುವ ಕಾರಣಕ್ಕೆ ಅದನ್ನು ಗೌಪ್ಯವಾಗಿ ಇಟ್ಟು ಚಾಕಲೇಟಿಗೆ ಮಾತ್ರ ವಿನಿಯೋಗಿಸುವಾಗ ಈ ಬಸ್ಸೊಂದು ನನಗೆ ಸಣ್ಣ ಸಂಪಾದನೆಯ ಮಾರ್ಗವಾಗಿಯೂ ಕಂಡದ್ದುಂಟು.

ಈಗ ಅನುಭವ ಮಾಗಿದ ಮೇಲೆ ದೂರದೂರಿನ ಪ್ರಯಾಣ ಕಟ್ಟಿ ಕೊಡುವ ಅನುಭವ ಭಿನ್ನವಾಗಿದೆ. ಆದರೆ ಕೆಲಮೊಮ್ಮೆ ವಾಂತಿ ಮಾಡುವವರು ಸಿಕ್ಕಿದರೆ ಮಾತ್ರ ಪ್ರಯಾಣ ನರಕ ಸದೃಶವಾಗಿಬಿಡುತ್ತದೆ. ನಮ್ಮೂರಿನಿಂದ ಮಡಿಕೇರಿ ಮಾರ್ಗವಾಗಿ



ಹೋಗುವಾಗ ಘಾಟಿ ಹತ್ತಿಯೇ ಹೋಗಬೇಕು. ಬೇರೆ ಕಡೆಯಿಂದ ಬರುವವರಿಗೆ ಸಂಪಾಜೆ ದಾಟಿತು ಅಂದರೆ ಬಳಬಳ ವಾಂತಿ ಶುರುವಾಗಿ ಕಿಟಕಿ, ಸೀಟು ಮತ್ತೊಬ್ಬರ ಮೈ ಕೈಗೂ ಕಿಂಚಿತ್ತಾದರೂ ಹನಿ ದಾಟಿಸಿ ಅವರ ಹೊಟ್ಟೆಯೊಳಗೂ ತಳಮಳ ಎಬ್ಬಿಸದೇ ಬಿಡುವುದಿಲ್ಲ. ನನಗಲ್ಲದಿದ್ದರೂ ಪಕ್ಕದ ಮರೆಗುಳಿ ವಾಂತಿಪ್ರಿಯರಿಗಾಗಿ ನಾನು ಪ್ರಯಾಣ ಮಾಡುವಾಗ ಒಂದಷ್ಟು ಪ್ಲಾಸ್ಟಿಕ್ ಕವರುಗಳನ್ನ ಮುಂಜಾಗ್ರತಾ